2. ಸದರೀ ತಾಲ್ಲೂಕಿನ ಅಮಲ್‌ದಾರ್‌ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸ್‌ಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಯಿನಾಂಗಳ ಬಗ್ಯೆ ಸ್ಯ 1881ನೇ ಇಸವಿ ಡಿಸಂಬರ್ 6ನೇ ತಾರೀಖಿನ 21ನೇ ನಂಬರು ಇಸ್ತಿಹಾರುನಾಮೇ ಪ್ರಕಾರ ಕೊಡಲ್ಪಟ್ಟ ಪಟ್ಟೇಗಳು ರದ್ದು ಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

---

ನಂ. 2. ತಾರೀಖು 23ನೇ ನವಂಬರ್ 1887ನೇ ಇಸವಿ.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಚಾಮರಾಜನಗರ ಮತ್ತು ಮೊಳಕಾಲ್ ಮುರು ತಾಲ್ಲೂಕುಗಳಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 144 ಫೈನಲ್‌ಟೈಟಿಲ್‌ಡೀಡ್ಡು ಯಾನೆ ಖಾಯಂ ಪಟ್ಟೆಗಳು ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡಿಪ್ಯೂಟಿ ಕಮ್ಮಿಷನರವರಗಳಿಗೆ ಬಟವಾಡೇ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕುಗಳ ಅಮಲ್‌ದಾರ್ರುಗಳಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದು ಕೊಳ್ಳುವ ಬಗ್ಯೆ ಸದರೀ ಯಿನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕುಗಳ ಅಮಲ್‌ದಾರ್ರುಗಳು ಅಂಥಾ ನೋಟೀಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಈ ಆಫಿಸಿನ 1881ನೇ ಇಸವಿ ಅಕ್ಟೋಬರು 28ನೇ ತಾರೀಖಿನ 17ನೇ ನಂಬರು ಮತ್ತು ಡಿಸಂಬರು 13ನೇ ತಾರೀಖಿನ 22ನೇ ನಂಬರು ಇಸ್ತಿಹಾರ್‌ನಾಮೆಗಳ ಪ್ರಕಾರ ಕೊಡಲ್ಪಟ್ಟ ಟೈಟಿಲ್‌ಡೀಡ್ಡುಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

---

## ಬೆಂಗಳೂರು ಡಿಸ್ಟ್ರಿಕ್ಟು.

### ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 1051.

ಮೃತಪಟ್ಟ ಮೂವತ್ತು ಯತ್ತಿನ ಮುದಪ್ಪನ ಹೆಂಡತಿ ಗಂಗಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ನಾಗಮ್ಮನು, ಮೃತಪಟ್ಟ ಸದರೀ ಗಂಗಮ್ಮನಿಗೆ ಮಗಳಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಮುನಿಸಿಪಾರ್ಟೆಟಿಗೆ ಕೀರಿದ ಆಕ್ಕಿಪೇಟೆ ಸ್ಥಳದ ನಾಗಮ್ಮನು ಸದರೀ ವಾಸಸ್ಥಳಾಗಿ ಮೃತಪಟ್ಟ ಗಂಗಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಾಗಮ್ಮನ ಅರ್ಜೀಯನ್ನು 1887ನೇ ಇಸವಿ ಡಿಸಂಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗಂಗಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ನವಂಬರ್ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

---

ದಿವಾಳಿಯಾದ ಡಿಕ್ರೀದೇಣೀದಾರ ಬೆಂಗಳೂರು ಕುಂಬಾರಪೇಟೇಲಿರತಕ್ಕ ದಲ ಲಖಾನನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ಮಿ|| ನಂಬರ್ 638.

ಹುಕ್ಕುಂ.

ಮೇಲ್ಕಂಡ ದಲಾಲಖಾನನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜೀರಾದ ಮೆ|| ಸಿ. ಕ್ರೈಸ್

ಸಾಹೇಬರವರ ರೂಬರೂ ಅರ್ಜೀದಾರನಾದ ದಲಾಲಖಾನನ್ನ ಖುದ್ದಾಗಿಯೂನ್ನು ಮತ್ತು ಸದರೀಯವನ ಲೇಣೇದಾರ್‌ರಾದ 6ನೇರ ತರಫ್ ಮೆ|| ಅಡ್ವೊಕೇಟ್ ನರಸಿಂಪಯ್ಯಂಗಾರ್‌ರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರೆಂದರೆ, 1—2—3—4—5ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ದಲಾಲಖಾನನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಕ್ಯೂರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ನವೆಂಬರ್ 11ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತ ಖತ್‌ನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

| ನಂಬರ್ | ಲೇಣೇದಾರರು) ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ. | ಜುಮ್ಲಾಗು | | | ದೇಣಿಗೆ ಸಾಲಕ್ಕೆ ಸೆಕ್ಯೂರಿಟಿ ಕೊಡಲ್ಪಟ್ಟಿದೆ. | ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ. | ಷರಾ. |
|---|---|---|---|---|---|---|---|
| 1 | ಬೆಂಗಳೂರಲ್ಲಿರತಕ್ಕ ಮಹಮ್ಮದ್‌ಸಾಬ್ .. | 80 | 0 | 0 | 0 | ನಮೂದಿಲ್ಲ | |
| 2 | ಡಿಟೋ ಸಂ|| ನಂಜುಂಡಪ್ಪ .. | 35 | 0 | 0 | ಡಿಟೋ | ಡಿಟೋ | |
| 3 | ಡಿಟೋ ದಿಬ್ಬೂರು ವೀರಕೆಟ್ಟಿ .. | 70 | 0 | 0 | ಡಿಟೋ | ಡಿಟೋ | |
| 4 | ಆನೇಕಲ್ ಮುನಿಸಾಮಪ್ಪ .. | 70 | 0 | 0 | ಡಿಟೋ | ಡಿಟೋ | |
| 5 | ಮಹಮ್ಮದಲ್ಲೀಸಾಬಿಗೆ .. | 20 | 0 | 0 | ಡಿಟೋ | ಡಿಟೋ | |
| 6 | ರಾಜಾಹಿಂಗನಕೋಟೆ ಲಿಂಗಣ್ಣ .. | 194 | 4 | 0 | ಡಿಟೋ | ಡಿಕರೀ ಮೊಬಲಗು | |
| | ಜುಮ್ಲಾ .. | 469 | 4 | 0 | | | |

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ವುಪ್ಪಾರಹಳ್ಳೀಲಿರುವ ತಿಪ್ಪರಾಜು ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರ್ 843.

ಹುಕ್ಕುಂ.

ಮೇಲ್ಕಂಡ ತಿಪ್ಪರಾಜನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜಿಯವರಾದ ಮೆ|| ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ತಿಪ್ಪರಾಜನ್ನ ಕುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್‌ರಾದ 3ನೇ ಸುಬ್ಬರಾಜನಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ, 1—2ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ತಿಪ್ಪರಾಜು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚ

ನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೊ ಚ್ಚರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ|| 1887ನೇ ಇಸವಿ ಅಕ್ಟೋಬರ್ 28ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

| ನಂಬರು. | ಲೇನೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ. | ಜೊಬಲಗು. | ಯೂನಾಗದೇಣಿ ಸ್ವೀಕರಿಸಿದ್ದು. | ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ. | ಷರಾ. |
|---|---|---|---|---|---|
| 1 | ಬೆಂಗಳೂರುಬಳಿ ಚಿಕ್ಕ ಮಾವಳ್ಳಿಲಿರುವ ರಾಮಸ್ವಾಮಿಶೆಟ್ಟಿ .. .. | 500—0—0<br>150—0—0 | ..<br>.. | ಡಿಕರೀ ಬಾಬತು<br>ತಮಸೂಕು ಬಾಬತು | |
| 2 | ಕನಕನಪಾಳ್ಯದ ತಿಮ್ಮಯ್ಯ .. | 10—0—0 | .. | ತಪಸೀಲ್ ಯಿಲ್ಲಾ | |
| 3 | ಬೆಂಗಳೂರುಬಳಿ ವುಪ್ಪಾರಹಳ್ಳಿಲಿರುವ ಸುಬ್ಬರಾಜು | 36—6—9 | .. | ಡಿಕರೀ ಬಾಬತು | |
| | ಜುಮ್ಲಾ . | 696—6—9 | | | |

ಸಿ. ಕೈನ್ಸ್,
ಸಬ್ ಜಡ್ಜ್.

ತಾರೀಖು 10ನೇ ನವೆಂಬರ್ 1887

ಸ|| 1888ನೇ ಇಸವಿ ಜನವರೀ ಗುರ್ಯೇಲಾಗಾಯಿತು 1889ನೇ ಇಸವಿ ಡಿಸೆಂಬರ್ 31ರ ವರಿಗೆ ಇದರಡಿ ವಿವರಿಸಲ್ಪಟ್ಟ ಮೇರೆ ಎರಡು ಸಾಲಿಗೆ ಬೆಂಗಳೂರು ಡಿಸ್ಟ್ರಿಕ್ಟ್ ಗವರ್ಮೆಂಟ್ ಜಂಗಲ್‌ಗಳಿಂದ ಸಾತ್‌ಮೆರಾಟೂ ರೆಯಿಲ್‌ವೇಗೆ ಸಾದೇ ಸರಬರಾಯಿ ಮಾಡುವ ಬಗ್ಯೆ ಸ|| 1887ನೇ ಇಸವಿ ಡಿಸಂಬರ್ 10ನೇ ಮರ್ಕುಂವರಿಗೆ ಯಿದರಡೀ ರುಜೂಮಾಡುವವರಿಂದ ಬಂದ್ ಮತ್ತು ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ತೆಗದುಕೊಳ್ಳಲ್ಪಡುವವು:—(ಉಭಯ ಪಾರ್ಟಿಗಳಿಗೂ ತೃಪ್ತಿಕರವಾಗಿದ್ದ ಪಕ್ಷಕ್ಕೆ ಮತ್ತೊಂದು ಸಾಲಿಗೂ ಖಾಯಿಷ್ ಪ್ರಕಾರ ಕಂಟ್ರಾಕ್ಟು ರಿನ್ಯೂ ಮಾಡಿಕೊಳ್ಳಬಹುದಾಗಿಯಿರುತ್ತೆ.

| ನಂಬರು. | ಸ್ಟೇಷನ್. | ರೆಯಿಲ್ವೇ ಸ್ಟೇಷನ್‌ಗೆ ಜಂಗಲ್‌ಗಳ ಸರಾಸರಿ ಫಾಸಲೆ ಮೈಲಿಗಳು. | ಮಾಹೇ ಬಂಡಕ್ಕೆ ಟರ್ಗಳ ಸಂಖ್ಯೆ. |
|---|---|---|---|
| 1 | ಕ್ಲೋಸ್‌ಪ್ಯಾಟೆ | 14 | 300 |
| 2 | ಚನ್ನಪಟ್ಟಣ | 16 | 200 |
| | | ಜುಮ್ಲಾ .. | 500 |

2. ಕಂಟ್ರಾಕ್ಟರು ಪ್ರತಿ ಮಾಹೇ ಮೊದಲನೇ ದಿನದಲ್ಲಿ ಮೇಲ್ಕಂಡ ಟರ್ಗಳ ಸೌದೇ ಒಪ್ಪಿಸತಕ್ಕದ್ದು.

3. ಪ್ರತಿ ಸ್ಟೇಷನಿನ ಸರಬರಾಯಿ ಬಗ್ಯೆ ಈತರಾಯಿಸಲ್ಪಡತಕ್ಕ ಮರಗಳು ಆ ಜಂಗಲಿನ ಪ್ರದೇಶ ಸುದಾ ಫಾರೆಸ್ಟು ಇಲಾಖೇಯವರಿಂದ ಗುರ್ತು ಮಾಡಲ್ಪಡುವದು.

4. ಕಂಟ್ರಾಕ್ಟಿನ ಷರತ್ತುಗಳು ದೇಖೀಲ್ ಹೆಚ್ಚಿಗೆ ತಪಸೀಲ್ ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕನ್ಸರ್ವೇಟರ್ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳ ಬಹುದು.